ವಂದು ಕೈಗೆ ಬಂದ್ರೆ ಸಾಕು, ವದ್ದು ಮನೆ ಕಾಲಿ ಮಾಡುಸ್ತೀನಿ.'

'ಯಾರಪಾ ಅದೂ?'

'ಅದೇ ವಬ್ಬ ಸ್ಕೂಲ್ ಮೇಷ್ಟ್ರದನೋ. ವಬ್ಬ ಮಗಳು ಬೇರೆ ಯಿದಾಳೆ. ಸ್ಕೂಲಿಗೆ ಹೋಗ್ತಳೆ. ಯೀಯಪ್ಪ ಗೋರ್ಮೆಂಟ್ ಹೈಸ್ಕೂಲ್ನಗೆ ಕೆಲಸಕ್ಕಿದನೆ. ಪಿವನು.'

'ಯಷ್ಟು ಬಾಕಿ ಯಿದೆ.'

'ಆರು ತಿಂಗಳು.'

ಥಟ್ಟಂತ ಜಂಬಂಣ ಹೇಳಿದ, ಯೋಚನೇನೇ ಮಾಡ್ಲಿಲ್ಲ. 'ಯಿನ್ನೊಂದಷ್ಟು ದಿಸ ಟೈಮ್ ಕೊಡು.'

'ಯಷ್ಟ್ಟೊಂತ ಕೊಡಲೋ? ಯಿನ್ನೊಂದೈದಿಸ ನೋಡ್ತೀನಿ. ಮನೆನಾಗಿರದನ್ನೆಲ್ಲಾ ಮಾರಿ ಹೊರಗೆ ಹಾಕ್ತೀನಿ.'

'ಮನೆನಗಿರದ್ನೆಲ್ಲಾ ಮಾರಿದ್ರೆ ನಿನ್ನ ಬಾಡಿಗೆ ಹುಟ್ಟದೇಂತ ಮಾಡೀಯೇನು?'

'ಅಯ್ಯೋ ಪಾಪ ಅಂತಂದು ಕೆಟ್ಟೆ ನೋಡು. ಯೀಗಿನ ಕಾಲದಗೆ ಯಾರಿಗೂ ಅಯ್ಯೋ ಪಾಪ ಅನ್ನಂಗಿಲ್ಲ. ಸಲಿಗೆ ತಗಂತರೆ. ಯಿನ್ನೂ ಹದಿನೆಂಟು ಮನೆಗಳದವೆ ಆ ವಟಾರದಗೆ. ಯೀ ಯಮ್ಮ ಬಾಡಿಗೆ ಕೊಡ್ತಿಲ್ಲ, ಕೊಟ್ಟಿಲ್ಲ ಅಂತೇನರ ವುಳಿದೋರಿಗೆ ಗೊತ್ತಾದ್ರೆ ಮುಗೀತು. ಯಾರೂ ದಮ್ಮಡಿ ಕೊಡಂಗಿಲ್ಲ ಆಮೇಲೆ.'

'ಅದೂ ನಿಜಾನ್ನು. ವೂರಾಗೆ ವಬ್ನಾದ್ರೂ ನಿನ ಮೇಲೆ ವಂದು ವಳ್ಳೇ ಮಾತಾಡಿದ್ರೆ ಕೇಳು.'

'ವಳ್ಳೇ ಮಾತು ಯಿಟ್ಗಂಡು ನಾಯೇನು ವುಪವಾಸ ಸಾಯ್ಲಾ? ವಳ್ಳೇ ಮಾತು ಯಾರಿಗೆ ಬೇಕೋ, ರೊಕ್ಕ ಬೇಕು. ಅಷ್ಟೇ. ಸೊಲ್ಪ ಸಹಾಯ ಮಾಡು. ಹೆಂಗಾನಾ ಮಾಡಿ ಬಾಕೀ ಬಾಡಿಗೆ ಕೊಡ್ಸು. ನಿನ್ ಕಮಿಶನ್ ಮುರ್ಕಂಡು ವುಳಿದಿದ್ದು ಕೊಡು.'

ಜಂಬಂಣ ಬೇರೇನೇ ಯೋಚನೆ ಮಾಡ್ತಿದ್ದ. ಈ ಸಿದ್ದಪ್ಪ ಏನಾರಾ ಭಗವಂತನ ಮುಂದೆ ನಿಂತ್ಕಪಾ ಅಂದ್ರೆ ನರಕ ಗ್ಯಾರಂಟಿ. ವಂದು ವಳ್ಳೇ ಕೆಲಸ ಮಾಡಿಲ್ಲ. ತಂದು ಹಂಗಾಗಬಾರದು. ಊರೋರೆಲ್ಲಾ ವನ್ನಾಕು ಮಾತು ಒಳ್ಳೇದನ್ನಬೇಕು.

ಅಷ್ಟರಗೆ ಬಂಡೀ ಸಿದ್ದಪ್ಪ ಅಂಗಿ ಮೇಲೆ ತುಂತುರಾಗಿ ಬಿದ್ದಿದ್ದ ಸೇಂಗಾ ಸಿಪ್ಪೆ ಕೊಡವಿಕೊಂಡು ಎದ್ದ. ತನ್ನ ನೋಟ್ ಬುಕ್ ಹಿಡ್ಕಂಡು ಜಂಬಂಣನೂ ಎದ್ದ.

* * *

ಮಧ್ಯಾಹ್ನ ಮನೆಗೆ ಬರ್ತಿದ್ದಂಗೇ ಜಂಬಂಣ ಮಾಡಿದ ಮೊದಲ ಕೆಲಸ ಅಂದ್ರೆ ಮನೆ ಕೆಲಸ ಮಾಡ್ತಿದ್ದ ಸರೋಜಮ್ಮನ ತಿಂಗಳ ಸಂಬ್ಳಾನ ಹದಿನೈದು ರೂಪಾಯಿ ಜಾಸ್ತಿ ಮಾಡಿದ. ಇವನಿಗೇನೋ ಪಿತ್ತ ಜಾಸ್ತಿ ಆಗಿರಂಗಿದೆ ಅಂತ ಹೆಣ್ತಿ ಮುಖ ಹುಳ್ಳಗೆ ಮಾಡಿಕೊಂಡ್ಲು. ಅವಳಿಗೇನೋ ಅನುಮಾನ ಈ ಸರೋಜಮ್ಮನ್ನ ಕಂಡ್ರೆ, ಯೇನಾರಾ ಕಿತಾಪತಿ ನಡ್ಸಿದಾರಾ ಯಿಬ್ರೂ...

ಸಂಬಳಾ ಜಾಸ್ತಿ ಅಂತ ಅಂದೋನೇ ನೆಟ್ಟಗೆ ತನ್ನ



ರೂಮಿಗೆ ಹೋಗಿ ನೋಟ್ ಬುಕ್ಕಲ್ಲಿ ಬರಕೊಂಡ "ಸರೋಜಮ್ಮ ಕೇಳದಿದ್ರೂ ನಾನಾಗೇ ಅವಳ ಸಂಬ್ಳ ಹದಿನೈದು ರೂಪಾಯಿ ಜಾಸ್ತಿ ಮಾಡಿದೆ." ಇನ್ನು ಸಂಬಳ ಜಾಸ್ತಿ ಮಾಡಕೆ ಯಾರೂ ಇರಲಿಲ್ಲ. ಇವತ್ತಿನ ಪಟ್ಟಿಯಲ್ಲಿ ಇಲ್ಲೀ ತನ ಯರಡೇ ವಳ್ಳೇ ಕೆಲಸ ಇದ್ದಿದ್ದು. ಅದುನ್ನ ಜಾಸ್ತಿ ಮಾಡಲೇ ಬೇಕು. ನೆಟ್ಟಗೆ ದುರ್ಗಮ್ಮನ ದೇವಸ್ಥಾನಕ್ಕೆ ಹೋದ. ಸಾಲು ಸಾಲಾಗಿ ಭಿಕ್ಷುಕರು ಕೂತಿದ್ರು. ಒಬ್ಬೊಬ್ರಿಗೂ ಒಂದೊಂದು ರೂಪಾಯಿ ಕೊಡ್ತಾ ಹೋದ. ಕೊಟ್ಟ ಕೊಟ್ಟಂಗೇ ನೋಟ್ ಬುಕ್ನಗೆ ಬರ್ಕೋತಾ ಹೋದ. ಹದಿಮೂರು ಜನ ಲೆಕ್ಕಕ್ಕೆ ಸಿಕ್ರು. ಅಲ್ಲಿಂದ ನೆಟ್ಟಗೆ ಬಾಕಿ ವಸೂಲಿ ಮಾಡಬೇಕಿದ್ದ